# ‘ಅಮೋಘ’ ದೇಶಭಕ್ತಿ...

■ ಗೌರಮ್ಮ ಕಟ್ಟಿಮನಿ

ಬದಲಾದ ಕಾಲಘಟ್ಟದಲ್ಲಿ, ಮರೆಯಾಗುತ್ತಿರುವ ನಮ್ಮ ಸಂಸ್ಕೃತಿ, ಪರಿಸರ ಪ್ರೀತಿ, ಕಾಳಜಿ ಹಾಗೂ ದೇಶಭಕ್ತಿಯನ್ನು ರೀಲ್ಸ್ ಮೂಲಕ ಯುವಜನಾಂಗಕ್ಕೆ ತಿಳಿಸುವ, ಅವರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಅಮೋಘ್.

ಇಂದು ಜನರು ಹೆಚ್ಚು ಹೊತ್ತು ಕಳೆಯುತ್ತಿರುವುದು ರೀಲ್ಸ್ ಸ್ಕ್ರಾಲ್ ಮಾಡುತ್ತ, ಹಾಗಾಗಿ ಇದರ ಮೂಲಕವೇ ಅವರನ್ನು ತಲುಪಬಹುದು ಎಂದು ಯೋಚಿಸಿದ ಅಮೋಘ್, ಭಾರತದ ಸ್ವಾತಂತ್ರ್ಯ ಹೋರಾಟದ ಕಥೆಗಳನ್ನು, ಹಿಂದೂ ಧರ್ಮ ಹಬ್ಬದ ಆಚರಣೆ, ದೇಸಿ ಕ್ರೀಡೆ, ಕೃಷಿ ಹಿನ್ನೆಲೆಯನ್ನು ಹೇಳುತ್ತ ಹೊರಟರು, ಅವು ಕ್ರಮೇಣ ಲಕ್ಷಾಂತರ ಜನರನ್ನು ತಲುಪಿದವು.

ಅನೇಕರು ಕಾಮಿಡಿ ರೀಲ್ಸ್ ಮುಖಾಂತರ ಖ್ಯಾತಿ ಪಡೆಯುತ್ತಿದ್ದರೆ, ಅದೇ ರೀಲ್ಸ್ ಮೂಲಕ ಇಂದಿನ ಯುವ ಪೀಳಿಗೆಗೆ ದೇಶಭಕ್ತಿ, ನಮ್ಮ ಸಂಸ್ಕೃತಿ ತಿಳಿಸುತ್ತಿದ್ದಾರೆ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಹರ್ಲಾಪುರ ಗ್ರಾಮದ ಯುವಕ ಅಮೋಘ್ ಹಿರೇಮಠ.

ಸದಾ ಸಾಮಾಜಿಕ ಜೀವನದಲ್ಲಿ ತೊಡಗಿರುವ ತಂದೆ ಸಾಂಬಯ್ಯ ಅವರು ದೇಶಭಕ್ತಿ, ಸಂಸ್ಕೃತಿ ಬಗ್ಗೆ ಜಾನಪದ ಗೀತೆ, ಬೀದಿ ನಾಟಕಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು. ಕಾಲ ಬದಲಾದಂತೆ ಅವು ತಲುಪುವ ಜನರ ಸಂಖ್ಯೆ ಕ್ಷೀಣಿಸಿತು, ಇಂದಿನ ಯುವಜನಾಂಗಕ್ಕೆ ಅವುಗಳನ್ನು ತಲುಪಿಸಲು ಅಮೋಘ್ ಆಯ್ಕೆ ಮಾಡಿಕೊಂಡಿದ್ದು ರೀಲ್ಸ್.

ಆರಂಭದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕುರಿತು ಒಂದು ರೀಲ್ ಮಾಡಿ ಅಪ್ಲೋಡ್ ಮಾಡಿದ್ದೆ, ಅದಕ್ಕೆ ಉತ್ತಮ ಪ್ರತಿಕ್ರಿಯೆ ಸಿಗ್ಲಿಲ್ಲ. ನಂತರ ಹಾಕಿದ ಭಗತ್ ಸಿಂಗ್ ಕುರಿತ ರೀಲ್‌ಗೆ ತುಂಬ ಜನರಿಂದ ಮೆಚ್ಚುಗೆ ವ್ಯಕ್ತವಾಯಿತು. ಜೊತೆಗೆ ಇನ್ನಷ್ಟು ವಿಡಿಯೊ ಮಾಡುವಂತೆ ಬೇಡಿಕೆಯೂ ಬಂತು. ನಂತರ ರಾಮಾಯಣ, ಮಹಾಭಾರತದ ಕಥೆ, ಭಗವದ್ಗೀತೆಯ ಸಂದೇಶ, ಹಿಂದೂ ಹಬ್ಬಗಳ ಸಾಂಪ್ರದಾಯಿಕ ಹಾಗೂ ವೈಜ್ಞಾನಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ರೀಲ್ ಮೂಲಕ ತಿಳಿಸುತ್ತಿದ್ದೇನೆ ಎನ್ನುತ್ತಾರೆ ಅಮೋಘ್.

ಕಣ್ಣಾಮುಚ್ಚಾಲೆ ಆಟದ ಹಿನ್ನೆಲೆಯುಳ್ಳ ರೀಲ್ ಮಿಲಿಯನ್ ವೀವ್ಸ್ ಕಂಡಿದೆ. ಜೊತೆಗೆ ತಮ್ಮ ಗ್ರಾಮಕ್ಕೆ ಸಮೀಪವಿರುವ ಕನ್ನಡ ಕವಿಗಳು, ಸಾಹಿತಿಗಳಿಗೆ ಸಂಬಂಧಿಸಿದ ಸ್ಥಳಗಳ ಕುರಿತು ರೀಲ್ ಮಾಡುವ ಇವರು, ಆಗಾಗ ಹಿರಿಯಜೀವಿಗಳೊಂದಿಗೆ ಚಿಟ್ ಚಾಟ್ ಮಾಡುತ್ತ, ಅವರ ಅನುಭವಗಳನ್ನು ವೀಕ್ಷಕರೆದುರು ತೆರೆದಿಡುತ್ತಿದ್ದಾರೆ.

ಸಮುದ್ರದಷ್ಟು ಸಮಸ್ಯೆಗಳಿದ್ದರೇನಂತೆ, ಆಕಾಶದಷ್ಟು ಅವಕಾಶಗಳಿವೆ, ಅವುಗಳನ್ನು ಬಳಸಿಕೊಂಡು ಸುಂದರ ಜೀವನ ರೂಪಿಸಿಕೊಳ್ಳಿ ಎನ್ನುವ ಇವರ ನೂರಾರು ಸ್ಫೂರ್ತಿದಾಯಕ ಮಾತುಗಳು ಅನೇಕರ ಬದುಕನ್ನು ಬದಲಾಯಿಸಿವೆ, ಸಾವಿನ ಕದ ತಟ್ಟಲು ಹೋದವರು, ಇವರ ಮಾತಿನಲ್ಲಿ ಸಾಂತ್ವನ, ಸಮಾಧಾನ ಹಾಗೂ ಜೀವನೋತ್ಸಾಹ ಕಂಡುಕೊಂಡಿದ್ದಾರೆ. ಅಂತಹ ಮಾಯೆ ಜೊತೆಗೆ ಗಂಭೀರತೆಯೂ ಇವರ ದನಿಯಲ್ಲಿದೆ.

‘ನುಡಿದಂತೆ ನಡೆಯಬೇಕು’ ಎನ್ನುವ ನಿಯಮ ಪಾಲಿಸುವ ಇವರು, ಸ್ವದೇಶಿ ವಸ್ತು ಬಳಸಿ ಎನ್ನುತ್ತಾ ಈವರೆಗೂ ಜೀನ್ಸ್ ಬಟ್ಟೆ ಧರಿಸಿಲ್ಲ, ಎಳನೀರು ಹೊರತು ಯಾವುದೇ ತಂಪು ಪಾನೀಯ ಸೇವಿಸಿಲ್ಲ. ನಿತ್ಯ ಒಂದು ಗಂಟೆ ಮಾತ್ರ ಸಾಮಾಜಿಕ ಜಾಲತಾಣದ ಬಳಕೆ!, ಅಪಾರ ದೇಶಭಕ್ತಿ ಹೊಂದಿರುವ ಇವರು ಇನ್‌ಸ್ಟಾಗ್ರಾಮ್‌ನಲ್ಲಿ ತಮ್ಮ ಹೆಸರಿನೊಂದಿಗೆ ಭಾರತ್ ಎಂದು ಸೇರಿಸಿಕೊಂಡಿದ್ದಾರೆ. ಅಮೋಘ್‌ಭಾರತ್(amoghbharat) ಎಂಬುವುದು ಅವರ ಇನ್‌ಸ್ಟಾಗ್ರಾಂ ಐಡಿ.

ಮಲ್ಲಕಂಬ ಕ್ರೀಡಾಪಟುವಾದ ಇವರು, ಸಹೋದರಿ ಅನನ್ಯ ಜೊತೆ ಸೇರಿ ನಿತ್ಯ 40 ರಿಂದ 50 ಮಕ್ಕಳಿಗೆ ಬೆಳಿಗ್ಗೆ ಹಾಗೂ ಸಂಜೆ ಮಲ್ಲಕಂಬ, ಯೋಗ, ದೊಡ್ಡಾಟ, ಸಣ್ಣಾಟ, ವೀರಗಾಸೆಯನ್ನು ಉಚಿತವಾಗಿ ತರಬೇತಿ ನೀಡುತ್ತಿದ್ದಾರೆ. ಯಾವುದೇ ವಿಷಯದ ಕುರಿತು ರೀಲ್ ಮಾಡುವಾಗ ಆಳವಾದ ಅಧ್ಯಯನ ಮಾಡುವ ಅಮೋಘ್, ಮಲ್ಲಕಂಬ ಕಲಿಯಲು ಬರುವ ಮಕ್ಕಳಿಗೆ ತರಬೇತಿ ನೀಡಿ ತಮ್ಮ ಕಂಟೆಂಟ್ ತಯಾರಿಸಲು, ವಿಡಿಯೊ ಎಡಿಟ್ ಮಾಡಲು ಬಳಸಿಕೊಳ್ಳುತ್ತಿದ್ದಾರೆ, ಈ ಮೂಲಕ ಅವರಿಗೂ ಈಗಿನ ತಂತ್ರಜ್ಞಾನದ ಸದ್ಬಳಕೆ ಕುರಿತು ತಿಳಿವಳಿಕೆ ಮೂಡಿಸುತ್ತಿದ್ದಾರೆ.

ರಾಜ್ಯದಾದ್ಯಂತ ಈಗಾಗಲೇ 300ಕ್ಕೂ ಹೆಚ್ಚು ವೇದಿಕೆಗಳಲ್ಲಿ ಉಪನ್ಯಾಸ ನೀಡಿರುವ ಅಮೋಘ್ 22 ವಯಸ್ಸಿನ ಯುವಕ. ಮೈಕ್ ಹಿಡಿದು ಮಾತನಾಡುವ ನನಗೆ, ಮೊಬೈಲ್ ಎದುರು ನಿಂತು ಮಾತನಾಡುವುದು ಕಷ್ಟವಾಗಲಿಲ್ಲ, ಲಕ್ಷಾಂತರ ಜನ ಕ್ರಮೇಣ ನನ್ನನ್ನು ಒಪ್ಪಿಕೊಂಡರು. ಎಲ್ಲೇ ಹೋದರೂ ಈಗ ಗುರುತಿಸುತ್ತಿದ್ದಾರೆ. ದೇಶಭಕ್ತಿ, ಸಂಸ್ಕೃತಿ, ಪ್ರಕೃತಿ ಹೊರತುಪಡಿಸಿ ಬೇರೆ ಯಾವುದೇ ಬೆಟ್ಟಿಂಗ್ ಆ್ಯಪ್ ಬಗ್ಗೆ ಪ್ರೊಮೋಷನ್ ವಿಡಿಯೊ ಮಾಡುವುದಿಲ್ಲ. ಆದಾಯಕ್ಕಾಗಿ ಇದನ್ನು ಮಾಡುತ್ತಿಲ್ಲ ಎನ್ನುತ್ತಾರೆ ಅಮೋಘ್.

ತಂದೆ ಸಾಂಬಯ್ಯ ಜನಪದ ಕಲಾವಿದ, ತಾಯಿ ಅನು ಪ್ರೌಢಶಾಲೆ ಶಿಕ್ಷಕಿ, ಸಹೋದರಿ ಅಂತರರಾಷ್ಟ್ರೀಯ ಯೋಗಾಪಟು ಅನನ್ಯ, ನನ್ನ ಎಲ್ಲ ಕೆಲಸಗಳಿಗೂ ಸಾಥ್ ನೀಡುತ್ತಿದ್ದಾರೆ ಎನ್ನುವ ಅಮೋಘ್‌ಗೆ ಇನ್‌ಸ್ಟಾಗ್ರಾಂನಲ್ಲಿ 1.29ಲಕ್ಷ ಫಾಲೋವರ್ಸ್ ಇದ್ದಾರೆ.

ಸದ್ಯ ಲಕ್ಷ್ಮೇಶ್ವರದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಅಮೋಘ ಅವರಿಗೆ ಭವಿಷ್ಯದಲ್ಲಿ ರೈತನಾಗುವ ಆಸೆಯಿದೆಯಂತೆ.

ಕೊಂಡಿ: https://www.instagram.com/amogh_bharat_?igsh=bmM4enVnODE0N3l2 ■



ಅಮೋಘ್ ಹಿರೇಮಠ